ಶ್ರೀ ರಮೇಶ್ ಸಿ ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :-

(ಅ) ಪ್ರತಿ ಜಿಲ್ಲೆಗೆ ಒಂದರಂತೆ ಒಟ್ಟು 20 ವಸತಿಶಾಲೆಗಳನ್ನು ದಿವಂಗತ ಮೂರಾರ್ಜಿ ದೇಸಾಯಿ ಹೆಸರಿನಲ್ಲಿ ಸ್ಥಾಪಿಸಲಾಗುವುದು. ಈ ವಸತಿ ಶಾಲೆಗಳನ್ನು ಸಾಕಷ್ಟು ಸ್ಥಳಾವಕಾಶ ಮತ್ತು ಕಟ್ಟಡಗಳಿರುವ ವಿದ್ಯಾಪೀಠಗಳಲ್ಲಿ ಮತ್ತು ಜಿಲ್ಲಾ ಪಂಚಾಯತ್ ಆಯ್ಕೆ ಮಾಡಿದ ಸ್ಥಳಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

(ಆ) ಬೀದರ್ ಜಿಲ್ಲೆಯಲ್ಲಿ ಒಂದು ವಸತಿ ಶಾಲೆಯನ್ನು ಜಿಲ್ಲಾಪಂಚಾಯತ್ ಆಯ್ಕೆ ಮಾಡಿದ ಸ್ಥಳದಲ್ಲಿ ಪ್ರಾರಂಭಿಸಲಾಗುವುದು.

(ಇ) 1995-96 ನೇ ಸಾಲಿನ ಆಯವ್ಯಯದಲ್ಲಿ ಈ ಬಾಬ್ತಿಗೆ 100 ಲಕ್ಷ ರೂ. ಗಳನ್ನು ಒದಗಿಸಿಕೊಳ್ಳಲಾಗಿದೆ. ವಸತಿ ಶಾಲೆಗಳು ಇನ್ನು ಪ್ರಾರಂಭವಾಗಿಲ್ಲದ ಕಾರಣ ಯಾವುದೇ ಹಣ ವ್ಯಯವಾಗಿರುವುದಿಲ್ಲ.

ವಿಷಯ :- ಅರಬ್ಬಿ ಸಮುದ್ರದ ನೀರಿಗೆ ತ್ಯಾಜ್ಯವನ್ನು ಬಿಡುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಕೈಗಾರಿಕೆಗಳು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2390 (2987)

ಶ್ರೀ ಎನ್.ಯೋಗಿಶ್ ಭಟ್ (ಮಂಗಳೂರು) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಬ್ಬಿ ಸಮುದ್ರದ ನೀರಿಗೆ ತ್ಯಾಜ್ಯವನ್ನು ಬಿಡುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಕೈಗಾರಿಕೆಗಳು ಯಾವುವು

ಆ) ಮಂಗಳೂರು ಮಹಾನಗರ ಪಾಲಿಕಾ ಒಳಚರಂಡಿ ಯೋಜನೆಯ ವೈಪಲ್ಯತೆಯಿಂದ ಸಮುದ್ರಕ್ಕೆ ದಿನನಿತ್ಯ ಬಿಡಲಾಗುತ್ತಿರುವ ತ್ಯಾಜ್ಯ ನೀರಿನ ಪ್ರಮಾಣ ಎಷ್ಟು? ಮತ್ತು ಇದರಿಂದಾಗಿ ಮೀನು (ಮತ್ಸ್ಯ) ಸಂತತಿಯ ಮೇಲೆ ದುಷ್ಪರಿಣಾಮವಾಗುತ್ತಿದೆಯೇ? ಆಗುತ್ತಿದ್ದಲ್ಲಿ, ಇದನ್ನು ತಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು.) :-

ಅ) ಭಾರಿ ಕೈಗಾರಿಕೆಗಳಾದ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಮತ್ತು ಕುದ್ರೆಮುಖ ಕಬ್ಬಿಣದ ಅದಿರು ಕಾರ್ಖಾನೆ (ಕೆ.ಐ.ಒ.ಸಿ.ಎಲ್) ಉದ್ದಿಮೆಗಳು ತ್ಯಾಜ್ಯವಸ್ತುವನ್ನು ಅರಬ್ಬಿ ಸಮುದ್ರಕ್ಕೆ ಹಾಲಿ ಬಿಡುತ್ತಿವೆ. ಅದಲ್ಲದೆ ಹಲವು ಸಣ್ಣ ಪ್ರಮಾಣದ ಮೀನು ಸಂಸ್ಕರಣ ಘಟಕಗಳೂ ಕೂಡ ಸಮುದ್ರಕ್ಕೆ ತ್ಯಾಜ್ಯವನ್ನು ಬಿಡುತ್ತಿವೆ. ಜಿಲ್ಲೆಯಲ್ಲಿ ಸ್ಥಾಪಿತವಾಗಲಿರುವ ಹಲವು ಬೃಹತ್ ಕಾರ್ಖಾನೆಗಳ ತ್ಯಾಜ್ಯವು ಸಮುದ್ರವನ್ನು ಸೇರುವ ನಿರೀಕ್ಷೆ ಇರುತ್ತದೆ.

ಆ) ಪ್ರತಿ ದಿನ ಸುಮಾರು 22.45 ಮಿಲಿಯನ್ ಲೀಟರ್ ಕಲುಷಿತ ನೀರನ್ನು ಮಂಗಳೂರು ಮಹಾನಗರ ಪಾಲಿಕೆಯಿಂದ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಬಹುಪಾಲು ಮಾಲಿನ್ಯ ನೀರು ಅರಬ್ಬಿ ಸಮುದ್ರಕ್ಕೆ ಸೇರುತ್ತದೆ. ಇದರಿಂದ ಜಲಚರಗಳು ಮೇಲೆ ದುಷ್ಪರಿಣಾಮವಾಗುತ್ತಿರುವ ಬಗ್ಗೆ ಇದೂವರೆಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಯಾವುದೇ ರೀತಿಯ ದೂರು ಬಂದಿರುವುದಿಲ್ಲ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಂಗಳೂರು ನಗರ ಪಾಲಿಕೆಗೆ ಒಳಚರಂಡಿ ಮತ್ತು ಶುದ್ಧೀಕರಣ ಘಟಕಗಳನ್ನು ಅಳವಡಿಸುವಂತೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ರ ಅಡಿಯಲ್ಲಿ ಸೂಚನೆ ನೀಡಿರುತ್ತದೆ. ಗೃಹ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಹ ಈ ಬಗ್ಗೆ ನಗರ ಪಾಲಿಕೆಗೆ ನೀಡಲು ಕೋರಿಕೊಳ್ಳಲಾಗಿದೆ.

ವಿಷಯ :- ಡ್ಯಾನಿಡಾ ಸಹಯೋಜಿತ ಪರಿಸರಾಧ್ಯಯನ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2391 (2986)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಸರ್ಕಾರದ ಸಹ ಭಾಗಿತ್ವದೊಂದಿಗೆ ಹಾಕಿಕೊಂಡಿರುವ ಡ್ಯಾನಿಡಾ ಸಹಯೋಜನೆ ಪರಿಸರಾಧ್ಯಯನ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಾವುವು (ವಿವರಗಳನ್ನು ತಿಳಿಸಿರಿ)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಸ್ತಾವಿಕ ಕ್ರಿಯಾ ಯೋಜನೆಯೇನು?

ಇ) ಸದರಿ ಕ್ರಿಯಾ ಯೋಜನೆ ಈಗ ಯಾವ ಹಂತದಲ್ಲಿದೆ ಇದೇ ರೀತಿ ಇನ್ನಿತರ ವಿದೇಶಿ ಸಹಭಾಗಿತ್ವ ಸಂಸ್ಥೆಗಳಾವುವು (ವಿವರಗಳನ್ನು ಒದಗಿಸುವುದು)?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು.) :-

ಅ) ಭಾರತ ಸರ್ಕಾರದ 1989 ನೇ ಸಾಲಿನಲ್ಲಿ ಡ್ಯಾನಿಡಾ ಸರ್ಕಾರವು ದಕ್ಷಿಣ ಕನ್ನಡ ಜಿಲ್ಲೆಯ ಪರಿಸರ ಅಧ್ಯಯನ ಯೋಜನೆಯನ್ನು ಕರ್ನಾಟಕ ಸರ್ಕಾರದೊಂದಿಗೆ ಮಾಡಬೇಕೆಂದು ಕೇಳಿಕೊಂಡಿತ್ತು. ಅವರಂತೆ ಜನವರಿ 1993 ನೇ ಸಾಲಿನಲ್ಲಿ ಇಂತಹ ಒಂದು ಯೋಜನೆಯೊಂದನ್ನು ಪ್ರಾರಂಭಿಸಲಾಯಿತು.

ಇಂತಹ ಒಂದು ಯೋಜನೆಯ ಮಾರ್ಗದರ್ಶನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು ಮುಖ್ಯೋದ್ದೇಶವಾಗಿರುತ್ತದೆ. ಇಂತಹ ಪರಿಸರ ಅಧ್ಯಯನ ಯೋಜನೆಯಿಂದ ಈ ಜಿಲ್ಲೆಯ ಉಪಯೋಗಕ್ಕೆ ನೈಸರ್ಗಿಕ ಸಂಪನ್ಮೂಲಗಳಿಂದ ಉಪಯೋಗವಾಗುವಂತಹ ಸೂಚನೆಗಳನ್ನು ವರದಿಯಲ್ಲಿ ಕೊಟ್ಟಿದ್ದಾರೆ.